

# ಅಪರಾಧ

ಚಿತ್ರ: ವಿಜಯಕುಮಾರಿ

■ ವಿ. ವಿಜಯೇಂದ್ರ ರಾವ್

ಸುಮಾರು ಒಂದು ಶತಮಾನಕ್ಕೂ ಮುಂಚೆ 'ಟೈಟಾನಿಕ್' ಎಂಬ ಬೃಹತ್ ಹಡಗು ಒಂದು ನೀರ್ಗಲ್ಲ ಬಂಡೆಗೆ ಡಿಕ್ಕಿ ಹೊಡೆದು ಇಡೀ ಹಡಗೇ ಹಂತ ಹಂತವಾಗಿ ಮುಳುಗಿ ಸಹಸ್ರಾರು ಮಂದಿ ತಮ್ಮ ಪ್ರಾಣ ಕಳೆದುಕೊಂಡಿದ್ದು ಈಗಾಗಲೇ ಎಲ್ಲರಿಗೂ ತಿಳಿದ ಸುದ್ದಿ.

ಆ ಹಡಗಿನ ಕ್ಯಾಪ್ಟನ್‌ನ ಅತಿಯಾದ ಆತ್ಮವಿಶ್ವಾಸದಿಂದ ಹೆಚ್ಚಿನ ಪ್ರಮಾಣದಲ್ಲಿ ಸಾವಿಗೀಡಾದದ್ದು ದುರಂತ. ಯಾಕೆಂದರೆ, ಯಾರು ಎಷ್ಟು ಹೇಳಿದರು ಆ ಬೃಹತ್ ಪ್ರಮಾಣದ ಹಡಗಿಗೆ ಹೋಲಿಸಿದರೆ, ಅತಿ ಕಡಿಮೆ ಸಂಖ್ಯೆಯಲ್ಲಿ ಲೈಫ್ ಸೇವಿಂಗ್ ಬೋಟ್‌ಗಳಿದ್ದವು. ಅವು ಜಾಸ್ತಿ ಸಂಖ್ಯೆಯಲ್ಲಿ ಇದ್ದಿದ್ದರೆ ಹೆಚ್ಚಿನ ಜನರನ್ನು ಉಳಿಸಬಹುದಾಗಿತ್ತು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸರಿ, ಇದ್ದ ಬೋಟ್‌ಗಳಲ್ಲಿ ಮೊದಲ ಆದ್ಯತೆ ಮಕ್ಕಳು ಹಾಗೂ ಮಹಿಳೆಯರಿಗೆ ಎಂದು ಅವರನ್ನು ಉಳಿಸಲು ಕಾರ್ಯಪ್ರವೃತ್ತರಾಗಿದ್ದಾಗ, ಇದನ್ನರಿತ ಒಬ್ಬ ಜಪಾನಿ ಯುವಕ ತಕ್ಷಣವೇ ಎಲ್ಲಿಂದಲೋ ಒಂದು ಗೌನ್, ಟೋಫನ್ ಸಂಪಾದಿಸಿ ಹೆಂಗಸಿನಂತೆ ಮೇಕಪ್ ಮಾಡಿಕೊಂಡು, ಮಹಿಳೆಯರ ಸಾಲಿನಲ್ಲಿ ನಿಂತು, ನಂತರ ಆ ಬೋಟನ್ನು ಏರಿ ತನ್ನ ಜೀವ ಉಳಿಸಿಕೊಂಡು ತನ್ನ ತಾಯ್ನಾಡಿಗೆ ವಾಪಸ್ ಬಂದನು.

ಜಪಾನ್ ಸರ್ಕಾರ ಅವನ ಸಮಯೋಚಿತ ಬುದ್ಧಿಯನ್ನು ಶ್ಲಾಘಿಸಿ ಸನ್ಮಾನ ಮಾಡಿತು. ಆದರೆ, ಯಾವಾಗ ಅವನು ತನ್ನ ಮನೆಗೆ ಹೋದನೋ... ಅಲ್ಲಿಯೂ ಆತ ಒಳ್ಳೆಯ ಸ್ವಾಗತ ಸಿಗಬಹುದು ಎಂದೆಣಿಸಿದ್ದ. ಆದರೆ, ಅವನ ತಾಯಿಯು ಅವನನ್ನು ಬಂದು ಅಪ್ಪಿಕೊಳ್ಳುವ ಬದಲು ಅವನಿಗೆ ಜೋರಾಗಿ ಕೆನ್ನೆಗೆ ಬಾರಿಸಿದರು. ಅವನ ಅಕ್ಕ ತಂಗಿಯರು ತುಚ್ಛವಾಗಿ ನೋಡ ತೊಡಗಿದರು. ಅವನಿಗೆ ಒಂದು ನಿಮಿಷ ಏನಾಗ್ತಿದೆ ಅಂತ ಗೊತ್ತಾಗಲಿಲ್ಲ. ಆಮೇಲೆ ಅವನ ತಾಯಿ ಹೇಳಿದರು ನಿನ್ನನ್ನು ನನ್ನ ಮಗ ಅಂತ ಹೇಳಿಕೊಳ್ಳಲು ಅವಮಾನವಾಗ್ತಿದೆ. ಹೆಂಗಸರ ವೇಷ ಹಾಕಿಕೊಂಡು, ಒಬ್ಬ ನಿಜವಾದ ಹೆಂಗಸಿನ ಪ್ರಾಣ ಹೋಗಲು ನೀನು ಕಾರಣವಾಗಿದ್ದೀಯಾ, ನಿನ್ನ ಮುಖ ನೋಡಲು ಅಸಹ್ಯವಾಗುತ್ತಿದೆ. ಇಲ್ಲಿಂದ ನೀನು ಹೊರಟು ಹೋಗು ಎಂದು ಬಲವಂತದಿಂದ ಅವನನ್ನು ಮನೆಯಿಂದ ಹೊರ ಹಾಕಿದರು. ■



# ಪಾಪುವಿನ ಅಳು

■ ಡಾ. ಕೆ.ಬಿ. ರಂಗಸ್ವಾಮಿ

ತೊಟ್ಟಿಲಲ್ಲಿ ಪುಟ್ಟ ಪಾಪು
ರಚ್ಚೆ ಹಿಡಿದು ಅಳುತ್ತಿತ್ತು
ಕೈ ಕಾಲು ಜಾಡಿಸುತ್ತಾ
ಒಂದೇ ಸಮನೆ ಕಿರಿಚುತ್ತಿತ್ತು!
ಚಿನ್ನ ರನ್ನ ಎನುತ ನಾನು
ಸನಿಹ ಹೋದೆನು
ಗಿಲಕ್ ಗಿಲಕ್ ಗಿಲಗೆಜ್ಜೆ
ಗಲಗಲಿಸಿದೆನು!
ಜೋ ಜೋ ಲಾಲಿ ಹಾಡು
ಗುನುಗುನಿಸಿದೆನು
ಕೆನ್ನೆ ಸವರಿ ಪಪ್ಪಿ ಕೊಟ್ಟು
ಮುದ್ದುಗರೆದೆನು!
ಪಾಪು ಅಳುವುದಿನಿತೂ ಕೂಡ
ನಿಲ್ಲಲೇ ಇಲ್ಲ
ಏನು ಮಾಡುವುದೆಂದು ಎನಗೆ
ತೋಚಲೇ ಇಲ್ಲ!
ಅಯ್ಯೋ ಕಂದ ಎನುತ ಅಮ್ಮ
ಓಡಿಬಂದಳು
ಮೆಲ್ಲನೆತ್ತಿ ಅದನು ಎದೆಗೆ
ಅವುಚಿಕೊಂಡಳು!
ಸೆರಗ ಮರೆಗೆ ಸರಿದ ಪಾಪು
ಶಾಂತವಾಯಿತು
ಯಾರೋ ಮೋಡಿ ಮಾಡಿದಂತೆ
ಗಪ್ ಚುಪ್ ಆಯಿತು!
ನನ್ನ ಮುದ್ದು ನನ್ನ ಲಾಲಿ
ವ್ಯರ್ಥವಾಯಿತು
ಪಾಪು ಅಳುವುದೇತಕೆಂದು
ಅರ್ಥವಾಯಿತು! ■

ಚಿತ್ರ: ವಿಜಯಕುಮಾರಿ